2006–07ನೇ ಸಾಲಿನಲ್ಲಿ ಲೆ.ಶೀ.5054ರ ಅಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖ್ಯರಸ್ತೆಗಳ ಅಭಿವೃದ್ಧಿಗಾಗಿ ಒಟ್ಟು ರೂ.414.07ಲಕ್ಷಗಳ ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಅ) ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ (ಪೂರ್ಣ ಮಾಹಿತಿ ನೀಡುವುದು)?

ತಾಲ್ಲೂಕುವಾರು ಬಿಡುಗಡೆ ಮಾಡಲಾದ ಹಣದ ವಿವರಗಳು:

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ತಾಲ್ಲೂಕುಗಳು	ಹಣ ಭರವಸೆ ಪತ್ರ
1.	ಹೊಸಕೋಟೆ	17.84
2.	ದೊಡ್ಡಬಳ್ಳಾಪುರ	30.57
3.	ದೇವನಹಳ್ಳಿ	14.16
4.	ಕನಕಪುರ	47.21
5.	ರಾಮನಗರ	239.08
6.	ಚೆನ್ನಪಟ್ಟಣ	39.36
7.	ಮಾಗಡಿ	17.35
8.	ನೆಲಮಂಗಲ	8.50
	ಒಟ್ಟು	**414.07**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1081(1478)

ಸದಸ್ಯರ ಹೆಸರು : ಶ್ರೀ ಅಂಜನಾಮೂರ್ತಿ (ನೆಲಮಂಗಲ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ) ನೆಲಮಂಗಲ ಪಟ್ಟಣದ ಜನಸಂಖ್ಯೆ 35,000 ಕ್ಕೂ ಮೇಲ್ಪಟ್ಟಿದ್ದು ಕುಡಿಯುವ ನೀರಿನ ಅಭಾವ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ;

ಬಂದಿದೆ.

ಆ) ಕುಡಿಯುವ ನೀರಿನ ಅಭಾವ ಶಾಶ್ವತವಾಗಿ ತಪ್ಪಿಸಲು ಪೀಣ್ಯ – ದಾಸರಹಳ್ಳಿಯಿಂದ ಕಾವೇರಿ ನೀರನ್ನು ಒದಗಿಸಲು ಸರ್ಕಾರ ಆಸಕ್ತಿ ವಹಿಸುವುದೆ?

ಬೆಂಗಳೂರು ಜಲ ಮಂಡಳಿಯು ಬೆಂಗಳೂರು ನಗರ ಪ್ರದೇಶ ಹಾಗೂ ಬೆಂಗಳೂರು ಸುತ್ತಲಿರುವ ಏಳು ನಗರಸಭೆ ಮತ್ತು ಒಂದು ಪುರಸಭೆಗಳಿಗೆ ನೀರು ಪೂರೈಸಲು ನೀರಿನ ಅಭಾವವಿರುವುದರಿಂದ ಇತರೆ ಪಟ್ಟಣಗಳಿಗೆ ಕಾವೇರಿ ನೀರು ಒದಗಿಸಲು ಸಾಧ್ಯವಾಗುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1082(1535)
ಸದಸ್ಯರ ಹೆಸರು : ಡಾ: ಅನ್ನದಾನಿ ಕೆ. (ನೆಲಮಂಗಲ)
ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಷ್ಟ್ರೀಯ ಹೆದ್ದಾರಿ 209 ರ ರಸ್ತೆಯು ಮಳವಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ದಳವಾಯಿ ಕೋಡಹಳ್ಳಿಯಿಂದ ಹಾಡ್ಲಿ ಸರ್ಕಲ್ ಮಾರ್ಗ ನಾಗೇಗೌಡನದೊಡ್ಡಿಯವರೆಗೆ ಸಂಪೂರ್ಣ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪೂರ್ಣ ಪ್ರಮಾಣದಲ್ಲಿ ಕೆಟ್ಟಿರುವ ಈ ರಸ್ತೆಯ ದುರಸ್ತಿಗೆ ಕಳೆದ ಮೂರು ವರ್ಷಗಳಲ್ಲಿ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ?

ರಾಹೆ–209, ದಿಂಡಿಗಲ್–ಬೆಂಗಳೂರು ಭಾಗದ ಕಿಮೀ 373.00 ರಿಂದ ಕಿಮೀ 399.00 ರವರೆಗಿನ ಮಳವಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ದಳವಾಯಿ ಕೊಡಹಳ್ಳಿಯಿಂದ ಹ್ಯಾಡ್ಲಿ ಸರ್ಕಲ್ ಮಾರ್ಗ ನಾಗೇಗೌಡನ ದೊಡ್ಡಿವರೆಗಿನ ರಸ್ತೆ ದುರಸ್ತಿಗೆ ಕೈಗೊಂಡಿರುವ ಕ್ರಮದ ಮಾಹಿತಿಯು ಈ ಕೆಳಗಿನಂತಿದೆ:

1) ರಾಹೆ–209 ದಿಂಡಿಗಲ್–ಬೆಂಗಳೂರು ಭಾಗದ ಕಿಮೀ 373.00 ರಿಂದ ಕಿಮೀ 380.00 ರವರೆಗಿನ ರಸ್ತೆ ಅಗಲೀಕರಣ ಕಾಮಗಾರಿಯು 2006ನೇ ಫೆಬ್ರವರಿಯಲ್ಲಿ ರೂ.481.778 ಲಕ್ಷಗಳಿಗೆ ತಾಂತ್ರಿಕ ಅನುಮೋದನೆಯಾಗಿದ್ದು ಈ ಕಾಮಗಾರಿಯನ್ನು ಟೆಂಡರಿನ ಆಧಾರದ ಮೇಲೆ ಗುತ್ತಿಗೆಯನ್ನು ವಹಿಸಲಾಗಿದ್ದು, 2007ನೇ ಡಿಸೆಂಬರ್ ಅಂತ್ಯದೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

2) ರಾಹೆ–209 ದಿಂಡಿಗಲ್–ಬೆಂಗಳೂರು ಭಾಗದ ಕಿಮೀ 380.00 ರಿಂದ ಕಿಮೀ 386.00 ರವರೆಗಿನ ರಸ್ತೆ ಅಗಲೀಕರಣ ಹಾಗೂ ಪುನರ್ ನಿರ್ಮಿಸುವ ಕಾಮಗಾರಿಗೆ ರೂ.600.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯಕ್ಕೆ ಅನುಮೋದನೆಗಾಗಿ